ಬೆಂಕಿ ಸೃಷ್ಟಿಸ್ಕೊಂಡು ಸುಟ್ಟು ಹೋಗುವಂಥದ್ದು. ಆ ರೀತಿಯ ವರನಾದ್ರೂ ಕೊಟ್ಟಿದ್ರೆ, ಪಾಪಿಗಳು ಅತ್ಯಾಚಾರ ಮಾಡಲು ಕ್ಯೂ ನಿಂತ್ಕೊಂಡಾಗ ಬೆಂಕಿ ಸೃಷ್ಟಿಸ್ಕೊಂಡು ಸತ್ತಾದ್ರು ಹೋಗಬಹುದಿತ್ತು" ಎಂದು ನಿಟ್ಟುಸಿರುಬಿಟ್ಟಳು. ನಾನು ಮೌನವಾಗಿ ಅವಳ ಮಾತು ಕೇಳುತ್ತಿದ್ದೆ. "ಮನುಷ್ಯ ನಾಗರಿಕನಾದ. ತನಗೆ ಬೇಕಾಗಿದ್ದನ್ನೆಲ್ಲ ಕಂಡುಹಿಡ್ದ. ವಿಜ್ಞಾನ ಅಂದ್ಕೊಂಡಿದಕ್ಕಿಂತ ಜಾಸ್ತಿನೇ ಶೋಧ ಮಾಡ್ತು. ತಂತ್ರಜ್ಞಾನವನ್ನ ಕೇಳ್ಲೇಬೇಡಿ. ಮೂರು ಇಂಚು ಉದ್ದದ ಈ ಫೋನ್ ಇದ್ಯಲ್ಲ! ಅದ್ರಲ್ಲೂ ಫೋನ್‌ನಲ್ಲಿರುವ ಕ್ಯಾಮೆರಾ! ಇವುಗಳ ಒಳ್ಳೆಯದು ಕೆಟ್ಟದರ ಬಗ್ಗೆ ಹೇಳ್ತಾ ಕೂತ್ರೆ ಈ ಶತಮಾನ ಸಾಕಾಗಲ್ಲ. ಈ ಫೋನ್‌ಗಳು ಎಷ್ಟು ಜನನಾ ಉದ್ಧಾರ ಮಾಡುದ್ವೊ. ಎಷ್ಟು ಜನನಾ ಹಾಳು ಮಾಡುದ್ವೊ. ಎಷ್ಟು ಜನನಾ ಬಲಿತಗೊಂಡ್ವೊ, ಅದೆಲ್ಲ ಆ ದೇವ್ರಿಗೇ ಗೊತ್ತು" ಎಂದಳು. ಅವಳ ಮಾತು ಅರ್ಥವಾಗದಿದ್ದರೂ, ಅವಳು ಹೇಳುತ್ತಿರುವ ವಿಷಯ ಕೇಳಿ ಆಶ್ಚರ್ಯವಾಯಿತು. ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಮಹಿಳೆಯರೆಲ್ಲ ಅನಕ್ಷರಸ್ಥ ಗುಗ್ಗುಗಳು ಎಂದು ತಿಳಿದಿರುವವರಿದ್ದಾರೆ. ಆದರೆ, ಇವಳು ರಾಮಾಯಣದಿಂದ ಶುರು ಮಾಡಿ ಈಗಿನ ಸಂಚಾರಿ ದೂರವಾಣಿಯಿಂದ ಆಗುತ್ತಿರುವ ಉಪಯೋಗ ಮತ್ತು ದುರುಪಯೋಗದ ತನಕ ಮಾತಾಡುತ್ತಿದ್ದಾಳೆಂದರೆ...

"ನಾನು ಅಣ್ಣನ ಆಶ್ರಯದಲ್ಲಿ ಹೇಗೋ ಇದ್ದೆ. ಎಲ್ಲವನ್ನು ಮರೆಯಲು ಸಾಧ್ಯವಿಲ್ಲದಿದ್ರೂ ಅದ್ನ ನೆನೆಪಿಸ್ಕೊಂಡು ಅಳ್ತಾ ಕುಳಿತುಕೊಳ್ಳುವಂತಿರಲಿಲ್ಲ. ಈಗ ದುಡ್ಡು ಹೊಟ್ಟೆ ತುಂಬಿಸಲು ಅಪ್ಪ ಇರಲಿಲ್ಲ. ನಮ್ಮ ಹೊಟ್ಟೆಯನ್ನು ನಾವೆ ತುಂಬಿಸ್ಕೊಬೇಕಿದ್ದರಿಂದ ದುಡಿಯಲೇಬೇಕಿತ್ತು. ಬರುತ್ತಿದ್ದ ಮನೆಯ ಖರ್ಚನ್ನು ಮೂರು ಜನರೂ ಸಮನಾಗಿ ಹಂಚಿಕೊಂಡು, ಮಿಕ್ಕ ದುಡ್ಡನ್ನು ಅಮ್ಮನಿಗೆ ಕಳುಹಿಸುತ್ತಿದ್ದೆ. ಒಂದು ರೀತಿಯಲ್ಲಿ ಚೆನ್ನಾಗಿಯೇ ನಡಿತಿತ್ತು. ಈ ನಡುವೆ ನನ್ನ ಅಕ್ಕನಿಗೆ ಅಂದ್ರೆ ದೊಡ್ಡಮ್ಮನ ಮಗಳಿಗೆ ಮದುವೆಯಾಗಿದ್ದರಿಂದ ಅವ್ಳು ಹೊರಟುಹೋದ್ಳು. ಅಣ್ಣ, ನಾನು ಇಬ್ರೆ ರೂಮ್‌ನಲ್ಲಿ. ಇಬ್ಬರಿಗೆ ಖರ್ಚು ಜಾಸ್ತಿ ಬರುತ್ತಿದ್ದರಿಂದ ಮತ್ತೊಬ್ಬರನ್ನು ಹುಡುಕಿದ ನಾನು, ಅವಳನ್ನು ನಮ್ಮ ರೂಮ್‌ಗೆ ಕರ್ಕೊಂಡು ಬರಲು ಅಣ್ಣನ ಅನುಮತಿ ಕೇಳಿದಾಗ ನಿರಾಕರಿಸಿಬಿಟ್ಟ. ಇಬ್ಬರೆ ಇರುವುದು ಅವನಿಗೆ ಯಾಕೆ ಇಷ್ಟವೆಂದು ನನಗೆ ತಿಳಿದಿರಲಿಲ್ಲ. ಅವನು ನನ್ನ ತಾಯಿತಂದೆಯ ಹೊಟ್ಟೆಯಲ್ಲಿ ಹುಟ್ಟಿರಲಿಲ್ಲ. ಆದ್ರೆ ನಾನು ಅವನನ್ನು ಅಣ್ಣನೆಂದೆ ಒಪ್ಪಿಕೊಂಡಿದ್ದೆ. ಅಪ್ಪ ಸತ್ತಾಗ ಅವರ ಕ್ರಿಯಾಕರ್ಮ ಮಾಡಿ, ತಲೆಬೋಳಿಸಿಕೊಂಡು ಮುಕ್ತಿಕೊಟ್ಟಿದ್ದು ಈ ಅಣ್ಣನೇ ಅಂತೆ. ಆದರೆ, ನನಗದು ಗೊತ್ತಿರಲಿಲ್ಲ. ಆಗ ನಾನು ಯಾವುದೋ ಲೋಕದಲ್ಲಿದ್ದೆ.

ಒಬ್ಬ ಅಣ್ಣ ನಿಜವಾಗಿಯೂ ತನ್ನ ತಂಗಿಯ ಬಳಿ ಆ ರೀತಿ ನಡ್ಕೊತಾನಾ? ಗೊತ್ತಿಲ್ಲ. ನಾನು ಅಣ್ಣ ಎನ್ನುತ್ತಿದ್ದ ನನ್ನ ದೊಡ್ಡಪ್ಪನ ಮಗ

